# ಜೆಎಸ್‌ಎಸ್ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

## ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ - 8

ಮತ್ತು

## ಕೃತಿ ಲೋಕಾರ್ಪಣೆ

**6 ಡಿಸೆಂಬರ್ 2018 * ಗುರುವಾರ * ಬೆಳಗ್ಗೆ 11.00**

ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮೈಸೂರು

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ

**ಶ್ರೀ ಎಸ್. ಗುರುಮೂರ್ತಿ**

ಭಾರತೀಯ ರಿಸರ್ವ್ ಬ್ಯಾಂಕಿನ ಅರೆಕಾಲಿಕ ನಿರ್ದೇಶಕರು

ಚಾರ್ಟರ್ಡ್ ಅಕೌಂಟೆಂಟ್ ಮತ್ತು 'ತುಘಲಕ್' ಪತ್ರಿಕೆ ಸಂಪಾದಕರು

ವಿಷಯ

**ಭಾರತದ ಜಾಗತಿಕ ಆಶೋತ್ತರಗಳು ಮತ್ತು ಸ್ಥಳೀಯ ಪಂಥಾಹ್ವಾನಗಳು**




ಅಧ್ಯಕ್ಷತೆ

**ಶ್ರೀ ಆರ್. ಗುರು**

ಅಧ್ಯಕ್ಷರು, ಎನ್‌ಆರ್ ಗ್ರೂಪ್ಸ್, ಮೈಸೂರು

ಕೃತಿ ಲೋಕಾರ್ಪಣೆ

**ಶ್ರೀಮತಿ ಆರ್. ರಾಜಲಕ್ಷ್ಮಿ**

ಕಾರ್ಪೊರೇಟ್ ಡೈರೆಕ್ಟರ್ ಅಂಡ್ ಸಿಎಸ್‌ಆರ್ ಕನ್ಸಲ್ಟೆಂಟ್

ಮ್ಯಾನೇಜಿಂಗ್ ಟ್ರಸ್ಟಿ, ಐಎಂಸಿಟಿಎಫ್ ಮತ್ತು ಟ್ರಸ್ಟಿ, ಹೆಚ್‌ಎಸ್‌ಎಸ್‌ಎಫ್, ಚೆನ್ನೈ

**ಕೃತಿ: ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಸಾಮಾಜಿಕ ಅನ್ವಯ**

ಲೇಖಕರು: ಡಾ. ಎ.ಎಸ್. ಕಿರಣ್‌ಕುಮಾರ್

**ತಮಗೆ ಆತ್ಮೀಯ ಸ್ವಾಗತ**



**ಶ್ರೀ ಸ್ವಾಮಿನಾಥನ್ ಗುರುಮೂರ್ತಿ**ಯವರು ಜನಪ್ರಿಯ ಲೇಖಕರು, ಪತ್ರಿಕೋದ್ಯೋಗಿಗಳು, ಚಾರ್ಟರ್ಡ್ ಅಕೌಂಟೆಂಟರು, ಅರ್ಥಶಾಸ್ತ್ರಜ್ಞರು, ರಾಜಕೀಯ ಹಾಗೂ ಆರ್ಥಿಕ ವಿಶ್ಲೇಷಕರು, ಹಲವಾರು ಉದ್ದಿಮೆಗಳಿಗೆ ಸಲಹೆಗಾರರು. ಇದೀಗ ಭಾರತೀಯ ರಿಸರ್ವ್ ಬ್ಯಾಂಕಿನ ಅರೆಕಾಲಿಕ ನಿರ್ದೇಶಕರು. ಇಂಥ ಬಹುಮುಖ ವ್ಯಕ್ತಿತ್ವವುಳ್ಳ ಇವರು ತಮಿಳುನಾಡಿನ ಪಣಂಪೇಟೆಯಲ್ಲಿ 6.2.1949 ರಂದು ಜನಿಸಿದರು. ಆರಂಭಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದ ಶಾಲೆಯಲ್ಲಿ, ಅನಂತರ ಚೆನ್ನೈನ ವಿವೇಕಾನಂದ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಪಡೆದರು.

ಮುಂಬಯಿಯ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಅರ್ಥಶಾಸ್ತ್ರ, ಹಣಕಾಸು ಮತ್ತು ನಿರ್ವಹಣಶಾಸ್ತ್ರಗಳ ಸಂದರ್ಶಕ ಪ್ರಾಧ್ಯಾಪಕರು. ಶಾಸ್ತ್ರ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಿಕ ಮಾನವಶಾಸ್ತ್ರ ವಿಷಯದ ವಿಶೇಷ ಪ್ರಾಧ್ಯಾಪಕರು. ಭಾರತದ 50 ಜನ ಪ್ರಬಲ ವ್ಯಕ್ತಿಗಳ ಪೈಕಿ ಇವರೂ ಒಬ್ಬರು ಎಂದು ಖ್ಯಾತ ಪತ್ರಿಕೆಗಳಾದ ಜಂಟಲ್‌ಮ್ಯಾನ್, ಬಿಸಿನೆಸ್ ಬೇರನ್ ಮತ್ತು ಇಂಡಿಯಾ ಟುಡೇ (ಮೂರು ಬಾರಿ) ಆಯ್ಕೆ ಮಾಡಿವೆ. ದೆಹಲಿಯ ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಷನ್ ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರಾದ ಶ್ರೀ ಗುರುಮೂರ್ತಿಯವರು ಅದರ ಧರ್ಮದರ್ಶಿ ಮಂಡಳಿಯ ಅಧ್ಯಕ್ಷರು ಹಾಗೂ ಹಿಂದೂ ಸ್ಪಿರಿಚುಯಲ್ ಅಂಡ್ ಸರ್ವಿಸ್ ಫೌಂಡೇಷನ್‌ನ (ಹೆಚ್‌ಎಸ್‌ಎಸ್‌ಎಫ್) ಮಾರ್ಗದರ್ಶಕರಾಗಿದ್ದಾರೆ.

ಇಂಡಿಯನ್ ಎಕ್ಸ್‌ಪ್ರೆಸ್‌ನ ಖ್ಯಾತ ಅಂಕಣಕಾರರು. 'ತುಘಲಕ್' ಎಂಬ ತಮಿಳಿನ ಖ್ಯಾತ ವಾರ ಪತ್ರಿಕೆಯ ಸಂಪಾದಕರು; ಸ್ವದೇಶಿ ಜಾಗರಣ ಮಂಚ್ ವೇದಿಕೆಯ ಸಹ-ಸಂಚಾಲಕರಾಗಿ ಖ್ಯಾತಿ ಹೊಂದಿದ್ದಾರೆ.

### ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954 ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. ಇಂದು ಇದರ ಆಶ್ರಯದಲ್ಲಿ ಸುಮಾರು 300ಕ್ಕೂ ಹೆಚ್ಚಿನ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇದರ ಸುವರ್ಣ ಮಹೋತ್ಸವವನ್ನು 2004 ರಲ್ಲಿ ಆಚರಿಸಿದ್ದು ಅದರ ನೆನಪಿಗಾಗಿ ವಿಶೇಷ ಉಪನ್ಯಾಸವನ್ನು ಪ್ರತಿ ವರ್ಷವೂ ಏರ್ಪಡಿಸಲಾಗುತ್ತಿದೆ. ಸುವರ್ಣ ಮಹೋತ್ಸವ ಮಾಲೆಯಡಿಯಲ್ಲಿ ಇದುವರೆಗೆ ಡಾ. ನಂದನ್ ಎಂ. ನಿಲೇಕಣಿ, ಡಾ. ಸ್ಯಾಮ್ ಪಿತ್ರೋಡ, ಡಾ. ಸಿ.ಎನ್.ಆರ್. ರಾವ್, ಸದ್ಗುರು ಜಗ್ಗಿ ವಾಸುದೇವ್‌ಜಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಡಾ. ಸುಧಾ ಮೂರ್ತಿ ಹಾಗೂ ಡಾ. ಎ.ಎಸ್. ಕಿರಣ್‌ಕುಮಾರ್ ಇವರುಗಳು ಉಪನ್ಯಾಸಗಳನ್ನು ನೀಡಿದ್ದಾರೆ.